ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಹಕ್ಕಿ ಕೊಲ್ಲುವ ಹಳ್ಳಿಯಲ್ಲಿ

> ಚಿಲಿಕಾ ಸರೋವರದ ಬಳಿ, ಒಂದು ಸಭೆ ನಡೆಸಿ ಮಾತನಾಡಿದ ನಂದಕಿಶೋರ್ ಭುಜ್ಬಲ್, ‘ನಿಮ್ಮ ಮನೆಗೆ ಯಾರಾದರೂ ಅತಿಥಿಗಳು ಬಂದರೆ ಅವರ ಕತ್ತು ಹಿಸುಕಿ ಕೊಲ್ಲುತ್ತೀರಾ? ಇಲ್ಲಾ ತಾನೆ? ಹಾಗೆಯೇ ಹಕ್ಕಿಗಳು ದೇವರ ಪ್ರತಿನಿಧಿಗಳಾಗಿ ನಿಮ್ಮಲ್ಲಿಗೆ ಬರುತ್ತಾ ಇವೆ. ಅವುಗಳನ್ನು ಕೊಲ್ಲಬೇಡಿ’ ಎಂದು ಹೇಳಿದರು. ಈ ಮಾತು ಕೇಳಿದ ಊರಜನರ ಮನಸ್ಥಿತಿ ಬದಲಾಯಿತು.

ಒರಿಸ್ಸಾದ ‘ಮಂಗಳ ಜೋಡಿ’ ಎಂಬ ತಾಣ ನೀರಿನಿಂದ ಸುತ್ತುವರಿದ ಒಂದು ಸಣ್ಣ ಹಳ್ಳಿ. ಎತ್ತ ನೋಡಿದರೂ ಜೌಗು ನೆಲ. ಮನೆ ಹಿಂದೆಯೇ ಸಾಲಾಗಿ ನಿಂತ ನಾಡ ನಾವೆಗಳು. ಕಸದ ರಾಶಿಯ ನಡುವೆ ದಾರಿ ಹುಡುಕಿ ಆ ಮನೆ ತಲುಪಿದಾಗ ಸಂಜೆಯಾಗಿತ್ತು. ಅಲ್ಲಿನ ಮುಖಂಡನ ಮನೆಯಲ್ಲಿ ಕೂತು ಸ್ಥಳೀಯರೊಟ್ಟಿಗೆ ಮಾತಾಡಿದಾಗ ದಿಗ್ಭ್ರಮೆಯಾಯಿತು. ಯಾಕೆಂದರೆ ಇವರೆಲ್ಲ ಪಳಗಿದ ಬೇಟೆಗಾರರು. ಇಟ್ಟ ಗುರಿ ತಪ್ಪಿದ್ದು ಕಡಿಮೆ. ನೀರಕ್ಕಿಗಳ ಕೊಲ್ಲುವ ವಿದ್ಯೆಯಲ್ಲಿ ಪರಿಣಿತರು. ಸ್ಥಳೀಯವಾಗಿ ಸಿಗುತ್ತಿದ್ದ ಮತ್ತು ವಲಸೆ ಬರುತ್ತಿದ್ದ ಬಾತುಕೋಳಿಗಳನ್ನು ಶರತ್ತುಕಟ್ಟಿ ಉಡಾಯಿಸುತ್ತಿದ್ದವರು.

ಪಕ್ಷಿ ಪ್ರಿಯರನ್ನು ಮಾತ್ರ ಪ್ರವಾಸಗಳಲ್ಲಿ ಕಂಡಿದ್ದ ನಮಗೆ ಹಕ್ಕಿ ಶಿಕಾರಿ ಮಾಡುವ ಇಂತಹ ವೃತ್ತಿಪರರನ್ನು ನೋಡಲು ಸಾಧ್ಯವಾಗಿರಲಿಲ್ಲ. ಇದೊಂದು ವಿಚಿತ್ರ ಸನ್ನಿವೇಶ. ಹದಿನೈದು ವರ್ಷಗಳ ಹಿಂದಿನ ನೆನಪಿಗೆ ಇವರನ್ನು ಎಳೆದುಕೊಂಡು ಹೋದಾಗ ಅವರು ಹೇಳಿದ್ದು ಕೇಳಿಯೇ ದಂಗಾಗಿ ಹೋದೆವು. ಹೀಗೂ ಇರುವುದು ಸಾಧ್ಯವೇ ಎಂದು ಯೋಚಿಸುವಷ್ಟು ಅವರ ವಿಷಯಗಳು ನಮಗೆ ಹೊಸತಾಗಿದ್ದವು.

ನಾವು ಕಂಡ ಮೀನುಗಾರರು ಬೆಹರ ಎಂಬ ಕುಲಕ್ಕೆ ಸೇರಿದವರು. ಮತ್ಸ್ಯ ವ್ಯಾಪಾರದ ಜೊತೆಗೆ ಪಕ್ಷಿಗಳ ಕೊಲ್ಲುವ ಉಪ ಕಸುಬು ರೂಢಿಸಿಕೊಂಡವರು. ಬಹಳ ಮೊದಲು ದಿನವೂ ಪೊಗದಸ್ತಾದ ಹಕ್ಕಿಗಳ ಹುಡುಕಿ ಕೊಲ್ಲತೊಡಗಿದ್ದರು. ಮೀನು ಹಿಡಿಯುವುದಕ್ಕಿಂತ ಹೆಚ್ಚು ಸಲೀಸಾದ ಕಸುಬಾಗಿ ಇದು ಕಾಣತೊಡಗಿತ್ತು. ಸ್ವಂತಕ್ಕೆ ಬಳಸಿಕೊಂಡು ಹೆಚ್ಚಾದ ಮಾಂಸವನ್ನು ಹಳ್ಳಿಗೆ ಸಮೀಪದಲ್ಲಿರುವ ಹೈವೇ ಡಾಬಾಗಳಿಗೆ ಮಾರುವ ವೃತ್ತಿ ಶುರುವಿಟ್ಟುಕೊಂಡರು. ಇದು ತಕ್ಕಮಟ್ಟಿಗೆ ಲಾಭವನ್ನು ಹೊತ್ತು ತಂದಿತು. ಸ್ಥಳೀಯ ಡಾಬಾಗಳಿಗೆ ನಗರದ ಜನ ಮುಗಿಬಿದ್ದು ಬಂದು ಹಕ್ಕಿ ಖಾದ್ಯಗಳ ಚಪ್ಪರಿಸತೊಡಗಿದ್ದರು. ಆಮೇಲೆ ಬಗೆಬಗೆಯ ಪುಕ್ಕದಹಕ್ಕಿಗಳ ಮಾಂಸದ ಬೇಡಿಕೆಯೂ ಹೆಚ್ಚಾಗುತ್ತಾ ಹೋಯಿತು. ಒಳ್ಳೆಯ ಕಮಾಯಿ ರುಚಿ ಕಂಡ ಮೇಲೆ ಇವರ ಬೇಟೆಯ ಪ್ರಮಾಣವೂ ದಿನದಿನವೂ ಜಾಸ್ತಿಯಾಗತೊಡಗಿತು.

ಬೇಟೆಬಿಟ್ಟರೆ ಬೇರೆ ಯಾವ ವಿದ್ಯೆಗಳೂ ಇವರಿಗೆ ಗೊತ್ತಿರಲಿಲ್ಲ.